ದಿನಾಂಕ: 03-6-2011ರಂದು ಮಧ್ಯಾಹ್ನ 1.30 ಗಂಟೆಗೆ ರಾಜ್ಯ ಮುಖ್ಯ ಮಾಹಿತಿ ಆಯುಕ್ತ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಮಾಹಿತಿ ಆಯುಕ್ತರುಗಳ ಸಭೆಯ ನಡವಳಿಕೆಗಳು:

ಈ ಸಭೆಯಲ್ಲಿ ಉಪಸ್ಥಿತರಿದ್ದ ಆಯುಕ್ತರುಗಳು/ಅಧಿಕಾರಿಗಳು:

1) ಶ್ರೀ ಎ.ಕೆ.ಎಂ. ನಾಯಕ್ – ರಾಜ್ಯ ಮುಖ್ಯ ಮಾಹಿತಿ ಆಯುಕ್ತರು.
2) ಡಾ: ಹೆಚ್.ಎನ್. ಕೃಷ್ಣ – ರಾಜ್ಯ ಮಾಹಿತಿ ಆಯುಕ್ತರು.
3) ಶ್ರೀ ಜೆ.ಎಸ್. ವಿರೂಪಾಕ್ಷಯ್ಯ – ರಾಜ್ಯ ಮಾಹಿತಿ ಆಯುಕ್ತರು.
4) ಶ್ರೀ ಡಿ. ತಂಗರಾಜ್ – ರಾಜ್ಯ ಮಾಹಿತಿ ಆಯುಕ್ತರು.
5) ಶ್ರೀ ಎಂ.ಆರ್. ಪೂಜಾರ್ – ರಾಜ್ಯ ಮಾಹಿತಿ ಆಯುಕ್ತರು.
6) ಶ್ರೀ ಟಿ. ರಾಮ ನಾಯ್ಕ್ – ರಾಜ್ಯ ಮಾಹಿತಿ ಆಯುಕ್ತರು.
7) ಡಾ: ಶೇಖರ್ ಡಿ. ಸಜ್ಜನರ್ – ರಾಜ್ಯ ಮಾಹಿತಿ ಆಯುಕ್ತರು.
8) ಶ್ರೀ ಬಿ.ಎ. ನಾಗೇಶ್ – ಕಾರ್ಯದರ್ಶಿಗಳು.
9) ಶ್ರೀ ಬಿ. ಶ್ರೀರಾಮ ರೆಡ್ಡಿ – ಕಾನೂನು ಅಧಿಕಾರಿಗಳು.
10) ಶ್ರೀ ಟಿ. ಅಶೋಕ – ಅಧೀನ ಕಾರ್ಯದರ್ಶಿ.
11) ಶ್ರೀ ಹೆಚ್. ಅನಂತ ಕುಮಾರ್ – ಶಾಖಾಧಿಕಾರಿ.
12) ಶ್ರೀ ಕೆ. ಶ್ರೀನಿವಾಸ್ – ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ.

**ವಿಷಯ**: 1. ರಾಜ್ಯ ಮಾಹಿತಿ ಆಯುಕ್ತರಗಳ ತಮಿಳು ನಾಡು ಮಾಹಿತಿ ಆಯೋಗದ ಭೇಟಿ ಕುರಿತು.

ರಾಜ್ಯ ಮಾಹಿತಿ ಆಯುಕ್ತರುಗಳಾದ ಶ್ರೀ ಜೆ.ಎಸ್. ವಿರೂಪಾಕ್ಷಯ್ಯ ಮತ್ತು ಶ್ರೀ ಡಿ. ತಂಗರಾಜ್ ರವರು ತಮಿಳುನಾಡು ಮಾಹಿತಿ ಆಯೋಗಕ್ಕೆ ಭೇಟಿ ನೀಡಿದ್ದು, ಸದರಿ ಭೇಟಿಯ ಕುರಿತು ಮಾಹಿತಿ ನೀಡಿದರು. ಚರ್ಚೆಯಲ್ಲಿ ತಮಿಳುನಾಡು ಮಾಹಿತಿ ಆಯೋಗದಲ್ಲಿ ಜಾರಿಯಲ್ಲಿರುವ ನಮೂನೆ ಮಾದರಿಯನ್ನು ನಮ್ಮ ಆಯೋಗದಲ್ಲಿ ಸಹ ಸೂಕ್ತ ಮಾರ್ಪಡಿನೊಂದಿಗೆ ಉಪಯೋಗಿಸಬಹುದೆಂದು ತೀರ್ಮಾನಿಸಲಾಯಿತು. ಆಯೋಗದಲ್ಲಿ ಬಾಕಿ ಇರುವ 6821 ಪ್ರಕರಣಗಳಲ್ಲಿ (ಸಮನ್ಸ್ ನೀಡದಿರುವ ಹೊಸ ಪ್ರಕರಣಗಳಲ್ಲಿ), **ಕಿಯಾನಿಕ್ಸ್ ಸಂಸ್ಥೆಯ** ಸಹಯೋಗದೊಂದಿಗೆ ಸಂಬಂಧಿಸಿದ ಎಲ್ಲಾ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಮತ್ತು ಅರ್ಜಿದಾರರಿಗೂ ಮಧ್ಯಂತರ ಆದೇಶ ಹೊರಡಿಸಿ ಪ್ರತಿಗಳನ್ನು ಜಿಲ್ಲಾಧಿಕಾರಿಗಳು/ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕಳುಹಿಸುವಂತೆ ನಿರ್ಧರಿಸಲಾಯಿತು. ಮುಂದುವರಿಸುತ್ತಾ ಪಿ.ಐ.ಓ.ಗಳಿಗೆ ನಿರ್ದಿಷ್ಠ ದಿನಾಂಕವನ್ನು ನಿಗದಿಪಡಿಸಿ ಮಾಹಿತಿಯನ್ನು ಅರ್ಜಿದಾರರಿಗೆ ಒದಗಿಸಲು ಸಭೆಯಲ್ಲಿ ಚರ್ಚಿಸಲಾಯಿತು.

ಕಿಯಾನಿಕ್ಸ್ ಸಂಸ್ಥೆಯವರು ಪಿ.ಐ.ಓ. ಮತ್ತು ಅರ್ಜಿದಾರರಿಗೆ ರವಾನಿಸಿದ ಪತ್ರಗಳ ಸ್ವೀಕೃತಿಗಳನ್ನು "ಪ್ರೂಫ್ ಆಫ್ ಡೆಲಿವರಿ"ಯ ಕಾರ್ಯವನ್ನು ನಿರ್ವಹಿಸಿ ಆಯೋಗಕ್ಕೆ ಸಲ್ಲಿಸುವ ಜವಾಬ್ದಾರಿಯನ್ನು ಹೊರಬೇಕೆಂದು ತೀರ್ಮಾನಿಸಲಾಯಿತು.

**ವಿಷಯ**: 2. ಪ್ರಕರಣಗಳ ಹಂಚಿಕೆ ಕುರಿತು.

ಸದರಿ ವಿಷಯವನ್ನು ಚರ್ಚಿಸಲಾಗಿ ಪ್ರಕರಣಗಳ ವಿಚಾರಣೆಗೆ ಹಂಚಿಕೆ ಮಾಡುವಾಗ ಅರ್ಜಿಯ ಜೇಷ್ಠತೆಯನ್ನು ಕಾಪಾಡಲು ಕ್ರಮ ಜರುಗಿಸುವಂತೆ ನಿರ್ಧರಿಸಲಾಯಿತು.

ಈ ಬಗ್ಗೆ ಆರ್ಥಿಕ ಇಲಾಖೆಯೊಂದಿಗೆ ಕಾರ್ಯದರ್ಶಿಯವರು ಸಮಾಲೋಚಿಸಿ ಪ್ರಸ್ತಾವನೆಯನ್ನು ಹಿಂಬಾಲಿಸಿ ಶೀಘ್ರವಾಗಿ ಮಂಜೂರಾತಿ ಆದೇಶ ಪಡೆಯಲು ಕ್ರಮ ವಹಿಸುವಂತೆ ಸೂಚಿಸಲಾಯಿತು.

ವಿಷಯ: ೯. ಕಛೇರಿಯ ಸಾದಿಲ್ವಾರ್ ಮೊತ್ತವನ್ನು ಮಂಜೂರಾತಿ ಕುರಿತು.

ಸದರಿ ವಿಷಯವನ್ನು ಚರ್ಚಿಸಲಾಗಿ ಕಛೇರಿಗೆ ಸಾದಿಲ್ವಾರು ವೆಚ್ಚ ರೂ. ೨೫,೦೦೦/- ಗಳನ್ನು ಮಂಜೂರು ಮಾಡುವಂತೆ ಸರ್ಕಾರಕ್ಕೆ ಈಗಾಗಲೇ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಇದು ಆರ್ಥಿಕ ಇಲಾಖೆಯಲ್ಲಿ ಬಾಕಿ ಇರುವುದಾಗಿ ತಿಳಿಸಲಾಯಿತು. ಕಾರ್ಯದರ್ಶಿಯವರು ಪ್ರಸ್ತಾವನೆಯನ್ನು ಹಿಂಬಾಲಿಸಿ ಆದಷ್ಟು ಬೇಗನೆ ಮಂಜೂರಾತಿ ಆದೇಶವನ್ನು ಪಡೆಯಬೇಕೇಂದು ಸೂಚಿಸಲಾಯಿತು.

ವಿಷಯ: 10. ಆಡಳಿತಾತ್ಮಕ ವಿಷಯಗಳು.

ಎಲ್ಲಾ ಆಯುಕ್ತರ ಕೋರ್ಟ್ ಹಾಲ್‌ಗಳಿಗೆ ಬೇಕಾಗಿರುವ ಲೇಖನ ಸಾಮಗ್ರಿ/ಗಣಕ ಯಂತ್ರ ಸಾಮಗ್ರಿಯ ಅಂದಾಜನ್ನು ಮುಂಚಿತವಾಗಿಯೇ ತಯಾರಿಸಿ ಅವುಗಳನ್ನು ಪಡೆದು ಸಂಗ್ರಹಿಸಿಟ್ಟು ನಿಗದಿತ ಸಮಯದೊಳಗೆ ಸರಬರಾಜು ಮಾಡಲು ನಿರ್ದೇಶನ ನೀಡಲಾಯಿತು.

<u>ಇತರೆ ವಿಷಯಗಳು:</u>

ವಿಷಯ: 11. ಮಿಥಿಕ್ ಸೊಸೈಟಿ ಕಟ್ಟಡದ ಆಯುಕ್ತರ ನ್ಯಾಯಾಲಯಗಳಿಗೆ ಹೆಚ್ಚುವರಿ ಪೀಠೋಪಕರಣ ಸರಬರಾಜು ಮಾಡುವ ಬಗ್ಗೆ.

ಈಗಾಗಲೇ ಲೋಕೋಪಯೋಗಿ ಇಲಾಖೆಗೆ ಮಿಥಿಕ್ ಸೊಸೈಟಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ನ್ಯಾಯಾಲಯ ಸಭಾಂಗಣ ೫, ೬, ೭ ಮತ್ತು ಆಯುಕ್ತರುಗಳ ಕೊಠಡಿಗೆ ಪೀಠೋಪಕರಣ ಸರಬರಾಜು ಮಾಡಲು ಈಗಾಗಲೇ ರೂ. 10.೦೦ ಲಕ್ಷಗಳು ನೀಡಲಾಗಿದ್ದು, ಹೆಚ್ಚುವರಿಯಾಗಿ (ನ್ಯಾಯಾಂಗಗಳಿಗೆ ಹೆಚ್ಚುವರಿ ಕುರ್ಚಿ) ಕಛೇರಿ ಸಿಬ್ಬಂದಿಗೆ ಪೀಠೋಪಕರಣಗಳ ಖರೀದಿಗಾಗಿ ರೂ. ೯.೦೦ ಲಕ್ಷಗಳನ್ನು ಲೋಕೋಪಯೋಗಿ ಇಲಾಖೆಗೆ ನೀಡಲು ನಿರ್ದೇಶಿಸಲಾಯಿತು.

ವಿಷಯ: 12. ಆಯೋಗಕ್ಕೆ ಹೊಸದಾಗಿ ಖರೀದಿಸುವ ಆಯುಕ್ತರುಗಳ ೫ ವಾಹನಗಳಿಗೆ ಅಗತ್ಯವಿರುವ ಬಿಡಿಭಾಗಗಳನ್ನು ಅಳವಡಿಸಲು ನಿಯಮಾನುಸಾರ ಕ್ರಮ ಜರುಗಿಸಲು ಅನುಮೋದನೆ ನೀಡಲಾಯಿತು.

| | | |
|---|---|---|
| (ಎ.ಕೆ.ಎಂ. ನಾಯಕ್)<br>ರಾಜ್ಯ ಮುಖ್ಯ ಮಾಹಿತಿ ಆಯುಕ್ತರು | (ಡಾ: ಹೆಚ್.ಎನ್. ಕೃಷ್ಣ)<br>ರಾಜ್ಯ ಮಾಹಿತಿ ಆಯುಕ್ತರು | 3/6/2011<br>(ಜೆ.ಎಸ್. ವಿರೂಪಾಕ್ಷಯ್ಯ)<br>ರಾಜ್ಯ ಮಾಹಿತಿ ಆಯುಕ್ತರು |
| (ಡಿ. ತಂಗರಾಜ್)<br>ರಾಜ್ಯ ಮಾಹಿತಿ ಆಯುಕ್ತರು | (ಎಂ.ಆರ್. ಪೂಜಾರ್)<br>ರಾಜ್ಯ ಮಾಹಿತಿ ಆಯುಕ್ತರು | (ಟಿ. ರಾಮ ನಾಯ್ಕ್)<br>ರಾಜ್ಯ ಮಾಹಿತಿ ಆಯುಕ್ತರು |

(ಡಾ: ಶೇಖರ್ ಡಿ. ಸಜ್ಜನರ್)
ರಾಜ್ಯ ಮಾಹಿತಿ ಆಯುಕ್ತರು